

ಚಿನ್ನ, ಬೆಳ್ಳಿ, ಪ್ಲಾಟಿನಂ ಮತ್ತಿತರ ಲೋಹಗಳಲ್ಲಿ ನಮಗೆ ಬೇಕಾದ ವಿನ್ಯಾಸದ ಆಭರಣಗಳು ದೊರೆಯುವುದು ಕಷ್ಟ. ದೊರೆತರೂ ಉಡುಪಿಗೆ ಹೊಂದುವುದಿಲ್ಲವೋ ಅಥವಾ ಬೆಲೆ ಹೆಚ್ಚಾಯಿತೆಂಬುದು ಬಹುತೇಕರ ಅನಿಸಿಕೆ. ಆದರೆ, ಟೆರಕೋಟಾ ಆಭರಣಗಳಲ್ಲಿ ಇಂಥ ರಗಳೆಗಳಿಲ್ಲ. ಕಾಲೇಜು ಹುಡುಗಿಯರಿಂದ ಹಿಡಿದು 60ರ ವಯೋಮಾನದವರಿಗೂ ಥರಾವರಿ ವಿನ್ಯಾಸದ ಟೆರಕೋಟಾ ಆಭರಣಗಳು ಮಾರುಕಟ್ಟೆಯಲ್ಲಿ ದೊರೆಯುತ್ತವೆ.

'ಸೃಜನಶೀಲ ವ್ಯಕ್ತಿತ್ವದವರು ಹೆಚ್ಚಾಗಿ ಟೆರ್‍ರಾಕೋಟ ಆಭರಣಗಳನ್ನು ಧರಿಸುತ್ತಾರೆ. ಅವರಿಗೆ ಬೇಕಾದ ವಿನ್ಯಾಸದಲ್ಲಿ ಉಡುಪಿಗೆ ತಕ್ಕಂತೆ ಹೊಂದುವ ಆಭರಣಗಳನ್ನು ತಯಾರಿಸಿಕೊಡುತ್ತೇನೆ' ಎನ್ನುತ್ತಾರೆ ಗ್ರೀನ್ ಲೋಟಸ್ ಟೆರಕೋಟಾ ಜ್ಯುವೆಲರಿಯ ವಿನ್ಯಾಸಕಿ ಪ್ರತಿಭಾ ವೀರು.

ಕಾಲೇಜು ಹುಡುಗಿಯರು ಆಧುನಿಕ ವಿನ್ಯಾಸದ ಇಷ್ಟಪಟ್ಟರೆ, ಗೃಹಿಣಿಯರು ಪುರಾತನ ಶೈಲಿಯ ಅಂದರೆ ಆ್ಯಂಟಿಕ್ ಮಾದರಿಯ ಆಭರಣಗಳನ್ನು ಬಯಸುತ್ತಾರೆ. ಉದ್ಯೋಗಸ್ಥ ಮಹಿಳೆಯರು ಜೀನ್ಸ್, ಕುರ್ತಾ, ಕಾಟನ್ ಸೀರೆಗಳ ಬಣ್ಣ, ವಿನ್ಯಾಸಕ್ಕೆ ತಕ್ಕ ಆಭರಣಗಳನ್ನು ತಯಾರಿಸಿಕೊಡಿ ಎಂದು ಬೇಡಿಕೆ ಮಂಡಿಸುತ್ತಾರೆ. ಅದರಲ್ಲೂ ಸಾಫ್ಟ್‌ವೇರ್ ಕ್ಷೇತ್ರದ ಮಹಿಳೆಯರಿಗೆ ಈ ಆಭರಣಗಳೆಂದರೆ ಪಂಚಪ್ರಾಣ ಎಂಬುದು ಟೆರಕೋಟಾ ವಿನ್ಯಾಸಕರ ಅಭಿಪ್ರಾಯ.

'ಕೆಲ ಗ್ರಾಹಕರು ತಮ್ಮ ಉಡುಪಿನ ಚಿತ್ರಗಳನ್ನು ವಾಟ್ಸ್ ಆ್ಯಪ್‌ನಲ್ಲಿ ಕಳುಹಿಸಿ ಇದಕ್ಕೆ ಹೊಂದುವಂತಹ ಆಭರಣ ಮಾಡಿ ಎನ್ನುತ್ತಾರೆ. ಆಗ ಮೊದಲು ಡ್ರಾಯಿಂಗ್ ಸ್ಕೆಚ್ ಹಾಕಿ, ಕಲರ್ ಸ್ಕೀಮ್ ಮಾಡಿ ಕಳಿಸುತ್ತೇನೆ. ಅದು ಅವರಿಗೆ ಇಷ್ಟವಾದಲ್ಲಿ ಮಾತ್ರ ಆಭರಣ ತಯಾರಿಸಿಕೊಡುತ್ತೇನೆ' ಎನ್ನುತ್ತಾರೆ ಪ್ರತಿಭಾ.

ಬುಡಕಟ್ಟು ಜನಾಂಗದವರು ಧರಿಸುತ್ತಿದ್ದ ಮಾದರಿಯ ಮಣ್ಣಿನಾಭರಣಗಳಿಗೆ ಹೆಚ್ಚು ಬೇಡಿಕೆ ಇದೆ. ಕೆಲವರು ಮಣ್ಣಿನ ಬಣ್ಣದ ಫೈಯರಿಂಗ್ ಮತ್ತೆ ಕೆಲವರು ಕಪ್ಪು ಫೈಯರಿಂಗ್ ಮಾಡಿರುವ ಆಭರಣಗಳನ್ನು ಬಯಸುತ್ತಾರೆ. ಕಾಟನ್ ಡ್ರೆಸ್ ಮತ್ತು ಸೀರೆಗಳಿಗೆ ಟೆರಕೋಟಾ ಆಭರಣಗಳನ್ನು ಧರಿಸುವುದು ಹೆಚ್ಚು ಸೂಕ್ತ.



ಅಕ್ರಲಿಕ್ ಬಣ್ಣಗಳಲ್ಲಿ ಹಲವು ವಿನ್ಯಾಸದಲ್ಲಿ ದೊರೆಯುವ ಟೆರ್‍ರಾಕೋಟ ಆಭರಣಗಳನ್ನು ಎಲ್ಲೆಂದರಲ್ಲಿ ಸುಲಭವಾಗಿ ಒಯ್ಯಬಹುದು. ಕಳೆದರೂ ಸಮಸ್ಯೆಯಿಲ್ಲ. ಮತ್ತೆ ಕೈಗೆಟುಕುವ ದರದಲ್ಲಿ ಖರೀದಿಸಬಹುದು.

ದೊಡ್ಡ ಜುಮುಕಿ ಚಂದ

ಸಣ್ಣ ಗಾತ್ರದ ಜುಮುಕಿಯಿಂದ ಹಿಡಿದು ದೊಡ್ಡದೊಡ್ಡ ಗಾತ್ರದಿಂದ ಜುಮುಕಿಗಳು ಹೆಚ್ಚು ಮಾರಾಟವಾಗುತ್ತವೆ. ₹ 150 ಆರಂಭಿಕ ಬೆಲೆಗಳಲ್ಲಿ ದೊರೆಯುವ ಈ ಜುಮುಕಿಗಳನ್ನು ಧರಿಸಿದರೆ ಕೊರಳಲ್ಲಿ ಸರವನ್ನೂ ಕೂಡಾ ಧರಿಸುವುದು ಬೇಡ. ಇಡೀ ಜುಮುಕಿಯಿಂದಲೇ ಧರಿಸಿದವರ ಅಂದ ಇಮ್ಮಡಿಯಾಗುತ್ತದೆ.

## ಹಲ ಬಗೆಯ ವಿನ್ಯಾಸ

ಬರೀ ಜುಮುಕಿ ಮಾತ್ರವಲ್ಲ, ಉಂಗುರು, ಬ್ರೇಸ್‌ಲೈಟ್ (ಮಣಿಕಟ್ಟು), ಕಾಲ್ಗೆಜ್ಜೆ, ಉತ್ತರ ಕರ್ನಾಟಕ ಶೈಲಿಯ ಟಿಕ್ಕಿ, ಬೋರ್‌ಮಳ, ಗುಂಡಿನ ಸರ, ಅವಲಕ್ಕಿ ಸರವೂ ದೊರೆಯುತ್ತದೆ.

ನೆಕ್ಲೆಸ್ ಮಾದರಿಯ ಹಲವು ಆಭರಣಗಳೂ ಈಗ ಟ್ರೆಂಡ್ ಆಗಿವೆ. ದೊಡ್ಡ ಜುಮುಕಿ, ರಾಮ್‌ಲೀಲಾ ಇಯರ್ ರಿಂಗ್ ಜತೆಗೆ ಕೊರಳನಪ್ಪುವ ಸುಂದರವಾದ ನೆಕ್ಲೆಸ್ ಧರಿಸಿದವರ ಅಂದವನ್ನು ಇಮ್ಮಡಿಗೊಳಿಸುತ್ತದೆ.

ಸಾಹಿತಿಗಳು, ಬುದ್ಧಿಜೀವಿಗಳು, ಸೆಲೆಬ್ರಿಟಿಗಳ ವಲಯದಲ್ಲೂ ಈ ಟೆರಕೋಟಾ ಆಭರಣಗಳ ಸ್ಥಾನ ಪಡೆದಿವೆ.

ಕಡಿಮೆ ಖರ್ಚಿನಲ್ಲಿ ಹೆಚ್ಚು ಅಂದವಾಗ ಕಾಣಲು, ನೆರೆದವರ ಗಮನ ಸೆಳೆಯಲು ಮಣ್ಣಿನ ಆಭರಣಗಳಿಗಿಂತ ಮತ್ತೊಂದು ಆಯ್ಕೆ ಇಲ್ಲ.

ಆನ್‌ಲೈನ್ ಸೇರಿದಂತೆ ಸ್ಥಳೀಯ ಮಾರುಕಟ್ಟೆ, ಬೆಂಗಳೂರಿನ ಚಿತ್ರಸಂತೆ, ಕರಕುಶಲ ಮೇಳಗಳಲ್ಲಿ ಟೆರಕೋಟಾ ಆಭರಣಗಳಿಗೆ ಕಾಯಂ ಸ್ಥಾನ. ಆದರೆ, ಫಿನಿಷಿಂಗ್ ಮತ್ತು ಗುಣಮಟ್ಟವನ್ನು ಖಾತ್ರಿ ಪಡಿಸಿಕೊಂಡು ಖರೀದಿಸುವುದು ಒಳ್ಳೆಯದು ಎಂಬುದು ವಿನ್ಯಾಸಕರ ಕಿವಿಮಾತು.

## ಕೈಗೆಟಕುವಷ್ಟೇ ಬೆಲೆ

ಮಣ್ಣಿನ ಆಭರಣದ ಬೆಲೆ ಸಾಮಾನ್ಯ ಮಹಿಳೆಗೂ ಕೈಗೆಟಕುವಂಥದ್ದು. ಕರಕುಶಲ ಮೇಳಗಳಲ್ಲಿ ಜುಮುಕಾ 150 ರೂಪಾಯಿ, ಉಂಗುರು 90 ರೂಪಾಯಿ, ಬ್ರೇಸ್ಲೆಟ್ 150 ರೂಪಾಯಿ, ಕಾಲ್ಗೆಜ್ಜೆ 300 ರೂಪಾಯಿ, ಪೂರ್ತಿ ಸೆಟ್ 250 ರೂಪಾಯಿಗಳಿಂದ ಆರಂಭ.. ಸಿಗುತ್ತದೆ. ದೇಸಿ ಅಂಗಡಿ ದರ (ಬಣ್ಣರಹಿತ) ಕಿವಿಯೋಲೆ 25 ರೂಪಾಯಿಗಳಿಂದ ಆರಂಭ. ಆನ್‌ಲೈನ್‌ನಲ್ಲಿಯೂ ಮಣ್ಣಿನ ಆಭರಣ ಲಭ್ಯ. ಮಾಹಿತಿಗೆ: **facebook.com/greenlotusjewels**

(ಚಿತ್ರಕೃಪೆ: ಗ್ರೀನ್‌ಲೋಟಸ್ ಜ್ಯುವೆಲ್ಲರಿ)